ಚಂದ್ರಶೇಖರ್ ಬಿನ್ ಪುಟ್ಟಪ್ಪ

ದಿನಾಂಕಃ **07/11/2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಮೇಲ್ಮನವಿದಾರರ ಪರ ಶ್ರೀ ಜಿ ಹೆಚ್ ಎಂ ವಕೀಲರಿಂದಃ

ನಾನು ಈ ಅಪೀಲಿನಲ್ಲಿ 2ನೇ ಮೇಲ್ಮನವಿದಾರನಾಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ.

ನಾನು ಈ ದಾವೆಯಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಪಿ-27- ದಿಃ 24-12-1956 ರ ಕ್ರಯ ಸಾಧನ ಪತ್ರದ ಧೃಡೀಕೃತ ಪ್ರತಿ

ನಿಶಾನೆ ಪಿ-28- M.R.No.859/1956-57ರ ಮುಟೇಷನ್ ರಿಜಿಸ್ಟರಿನ ಧೃಡೀಕೃತ ಪ್ರತಿ

ನಿಶಾನೆ ಪಿ-29- ಉಪತಹಶೀಲ್ದಾರ್ ದೊಡ್ಡಮಗ್ಗೆ ಹೋಬಳಿ ರವರು ನೀಡಿರುವ ವಾದಿಯವರ ಕುಟುಂಬಕ್ಕೆ ಸಂಬಂಧಿಸಿದ ವಂಶ ಧೃಡೀಕರಣ ಪತ್ರ

ನಿಶಾನೆ ಪಿ-30- ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಋಣಭಾರ ಪ್ರಮಾಣ ಪತ್ರ

ನಿಶಾನೆ ಪಿ-31- ಮಲ್ಲಿಕಾರ್ಜುನಯ್ಯ ಬಿನ್ ಲೇಟ್ ನಂಜಪ್ಪ ಇವರ ಆಧಾರ ಕಾರ್ಡ್ ಸದರಿ ಆಧಾರ್ ಕಾರ್ಡ ಬೇಲಿ ಕಪ್ಪೂರವಳ್ಳಿ, ದೊಡ್ಡಮಗ್ಗೆ, ಹಾಸನ ಜಿಲ್ಲೆಗೆ ಸಂಬಂಧಿಸಿದ್ದು ಇರುತ್ತದೆ.

ನಿಶಾನೆ ಪಿ-32- ಮಲ್ಲಿಕಾರ್ಜುನಯ್ಯ ಇವರ ಮರಣ ಪ್ರಮಾಣ ಪತ್ರ

ನಿಶಾನೆ ಪಿ-33- ಮಲ್ಲಿಕಾರ್ಜುನಯ್ಯ ಬಿನ್ ಲೇಟ್ ನಂಜಪ್ಪ ಇವರ ಆದಾಯ ಧೃಡೀಕರಣ ಪತ್ರ

ನಿಶಾನೆ ಪಿ-34- ಗ್ರಾಮಲೆಕ್ಕಾಧಿಕಾರಿ ದೊಡ್ಡಹಳ್ಳಿವೃತ್ತ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲೂಕು ರವರು ನೀಡಿರುವ ಮಲ್ಲಿಕಾರ್ಜುನಯ್ಯ ರವರ ವಂಶವೃಕ್ಷ

ನಿಶಾನೆ ಪಿ-35- ದಿಃ 13-07-1965 ರಂದು ಹೊಸೂರು ಗ್ರಾಮದಲ್ಲಿರುವ ಪಟೇಲ ಶ್ರೀನಿವಾಸ ಅಯ್ಯಂಗಾರ್ ರವರ ಮಕ್ಕಳು ಎಂ.ಎಸ್.ಶ್ಯಾಂ ಅಯ್ಯಂಗಾರ್ ರವರಿಗೆ ಕೋಟೆ ಕಪ್ಪೂರವಳ್ಳಿ ಗ್ರಾಮದ ಬಸವಣ್ಣ ರವರ ಮಗ ಮಲ್ಲಿಕಾರ್ಜುನಯ್ಯ @ ಪುಟ್ಟಪ್ಪ ರವರು ಬರೆದುಕೊಟ್ಟ ಕ್ರಯಪತ್ರದ ಧೃಡೀಕೃತ ಪ್ರತಿ

ಪಾಟೀ ಸವಾಲುಃ

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು